# ಕರ್ನಾಟಕ ವಿಧಾನ ಪರಿಷತ್ತು

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1943

2] ಮಾನ್ಯ ಸದಸ್ಯರ ಹೆಸರು : ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)

3] ಉತ್ತರಿಸುವ ದಿನಾಂಕ : 26.03.2020.

4] ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪೊಲೀಸ್ ಇಲಾಖೆ ವ್ಯಾಪ್ತಿಯಡಿ ಗ್ರೂಪ್-ಎ,ಬಿ,ಸಿ,ಡಿ ಅಧಿಕಾರಿ ಮತ್ತು ನೌಕರರಿಗೆ ಬೆಂಗಳೂರು ನಗರದ ಯಾವ ಯಾವ ಪ್ರದೇಶಗಳಲ್ಲಿ ವಸತಿ ಗೃಹಗಳನ್ನು ನಿರ್ಮಾಣ ಮಾಡಲಾಗಿದೆ; ಈ ವಸತಿಗೃಹಗಳಲ್ಲಿ ಹಂಚಿಕೆಯಾಗಿರುವ ವಸತಿ ಗೃಹಗಳೆಷ್ಟು; ಖಾಲಿ ಇರುವ ವಸತಿ ಗೃಹಗಳೆಷ್ಟು; (ಪ್ರದೇಶವಾರು, ವೃಂದವಾರು ವಿವರ ನೀಡುವುದು) | ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-ಎ,ಬಿ,ಸಿ,ಡಿ ಅಧಿಕಾರಿ ನೌಕರರಿಗೆ ವಸತಿಗೃಹ ನಿರ್ಮಾಣ ಮಾಡಿರುವ ಪ್ರದೇಶವಾರು, ವೃಂದವಾರು ವಿವರ, ಹಂಚಿಕೆಯಾಗಿರುವ ಮತ್ತು ಖಾಲಿ ಇರುವ ವಸತಿ ಗೃಹಗಳ ಮಾಹಿತಿಯನ್ನು **ಅನುಬಂಧ-ಎ** ನಲ್ಲಿ ಲಗತ್ತಿಸಿದೆ. |
| ಆ) | ಬೆಂಗಳೂರು ನಗರದಲ್ಲಿ ಹೊಸದಾಗಿ ನಿರ್ಮಾಣಗೊಂಡು ಹಂಚಿಕೆಯಾಗಲು ಬಾಕಿ ಇರುವ ವಸತಿ ಗೃಹಗಳೆಷ್ಟು; ಮತ್ತು ಇವುಗಳನ್ನು ಯಾವ ಯಾವ ಪ್ರದೇಶಗಳಲ್ಲಿ ನಿರ್ಮಾಣ ಮಾಡಲಾಗಿದೆ; ಹಾಗಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಸದರಿ ವಸತಿಗೃಹಗಳನ್ನು ಹಂಚಿಕೆ ಮಾಡಲಾಗುವುದು; | ಬೆಂಗಳೂರು ನಗರದಲ್ಲಿ ಪೊಲೀಸ್ ಗೃಹ 2020 ಯೋಜನೆಯಡಿ ಹೊಸದಾಗಿ ನಿರ್ಮಾಣಗೊಂಡು ಹಂಚಿಕೆಯಾಗಲು ಬಾಕಿ ಇರುವ ವಸತಿ ಗೃಹಗಳ ಪ್ರದೇಶವಾರು ಮಾಹಿತಿಯನ್ನು **ಅನುಬಂಧ-ಬಿ** ನಲ್ಲಿ ಲಗತ್ತಿಸಿದೆ. ಈ ವಸತಿಗೃಹಗಳನ್ನು ಶೀಘ್ರವಾಗಿ ಹಂಚಿಕೆ ಮಾಡಲು ಕ್ರಮಕೈಗೊಳ್ಳಲಾಗುವುದು. |
| ಇ) | ಪೊಲೀಸ್ ಇಲಾಖೆ ವ್ಯಾಪ್ತಿಯಡಿ ಬೆಂಗಳೂರು ನಗರದಲ್ಲಿ ನಿರ್ಮಾಣ ಮಾಡಿರುವ ವಸತಿ ಗೃಹಗಳನ್ನು ಹಂಚಿಕೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳೇನು? (ವಿವರ ನೀಡುವುದು) | ಕರ್ನಾಟಕ ಸರ್ಕಾರಿ (ಸಹಾಯಕ ಪೊಲೀಸ್ ಸೂಪರಿಂಟೆಂಡೆಂಟರ ದರ್ಜೆ ಮತ್ತು ಅದಕ್ಕಿಂತ ಮೇಲಿನ ಪೊಲೀಸು ಅಧಿಕಾರಿಗಳ ವಸತಿ ಗೃಹಗಳ ಹಂಚಿಕೆ) ನಿಯಮಗಳು, 2011 ಮತ್ತು ಕರ್ನಾಟಕ ಸರ್ಕಾರಿ (ಸರ್ಕಾರಿ ವಸತಿ ಗೃಹಗಳ ಹಂಚಿಕೆ) ನಿಯಮಗಳು 1999 ರಲ್ಲಿ ವಿಧಿಸಿರುವ ಮಾನದಂಡಗಳ ಪ್ರಕಾರ ವಸತಿಗೃಹಗಳನ್ನು ಹಂಚಿಕೆ ಮಾಡಲಾಗುತ್ತಿದೆ. (ಪ್ರತಿಗಳನ್ನು ಲಗತ್ತಿಸಿದೆ) |

| | | |
|---|---|---|
| ಈ) | ಫ್ರೇಜರ್ ಟೌನ್‌ನ ಕೋಲ್ಸ್ ಪಾರ್ಕ್ ರಸ್ತೆಯ ಹತ್ತಿರ ಹೊಸದಾಗಿ ನಿರ್ಮಿಸುತ್ತಿರುವ ವಸತಿಗೃಹಗಳ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಿ ಹಂಚಿಕೆ ಮಾಡುವುದು ಯಾವಾಗ? (ವಿವರ ನೀಡುವುದು) | ಪೊಲೀಸ್ ಗೃಹ 2020 ಯೋಜನೆಯ 3ನೇ ಹಂತದಲ್ಲಿ ಬೆಂಗಳೂರು ನಗರದ ಫ್ರೇಜರ್ ಟೌನ್‌ನ ಕೋಲ್ಸ್ ಪಾರ್ಕ್ ರಸ್ತೆಯಲ್ಲಿ 32 ಎಸ್.ಐ. ವಸತಿಗೃಹ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪೂರ್ಣಗೊಳ್ಳುವ ಹಂತದಲ್ಲಿದೆ. ಸದರಿ ಕಟ್ಟಡಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಫ್ಲೋರಿಂಗ್, ಪೈಂಟಿಂಗ್, ನೀರು ಸರಬರಾಜು, ವಿದ್ಯುತ್ ಸರಬರಾಜು ಇತ್ಯಾದಿ ಕೆಲಸಗಳು ಪ್ರಗತಿಯಲ್ಲಿರುತ್ತದೆ. ಈ ಕಾಮಗಾರಿಗಳನ್ನು ಜುಲೈ 2020 ರ ಅಂತ್ಯದೊಳಗೆ ಪೂರ್ಣಗೊಳಿಸಿ, ಕೆ.ಎಸ್.ಪಿ.ಹೆಚ್&ಐ.ಡಿ.ಸಿ.ಎಲ್., ಬೆಂಗಳೂರು ರವರಿಂದ ಹಸ್ತಾಂತರಗೊಂಡ ನಂತರ ಶೀಘ್ರವಾಗಿ ವಸತಿಗೃಹ ಹಂಚಿಕೆ ಮಾಡಲಾಗುವುದು. |

**ಸಂಖ್ಯೆ:ಹೆಚ್‌ಡಿ 36 ಪಿಬಿಎಲ್ 2020**

[ಬಸವರಾಜ ಬೊಮ್ಮಾಯಿ]
ಗೃಹ ಸಚಿವರು

# ಅನುಬಂಧ-ಎ

| ಕ್ರ.ಸಂ. | ಪ್ರದೇಶ | ವೃಂದವಾರು ನಿರ್ಮಾಣ ಮಾಡಲಾದ ವಸತಿಗೃಹಗಳು | | | ಹಂಚಿಕೆಯಾಗಿರುವ ವಸತಿಗೃಹಗಳು | ಖಾಲಿ ರುವ ವಸತಿಗೃಹಗಳು | ಒಟ್ಟು | ಷರಾ |
|---|---|---|---|---|---|---|---|---|
| | | ಎ | ಬಿ | ಸಿ & ಡಿ | | | | |
| 1 | ಜಾರಕ್ ಬಂಡೆ | 0 | 1 | 313 | 228 | 86 | 314 | 86 ಸಿ ವೃಂದದ ವಸತಿಗೃಹಗಳು ಖಾಲಿ ಇರುತ್ತವೆ. |
| 2 | ಜಾಲಹಳ್ಳಿ | 0 | 0 | 57 | 54 | 3 | 57 | |
| 3 | ರಾಜಾಜಿನಗರ | 0 | 0 | 62 | 62 | 0 | 62 | |
| 4 | ಯಶವಂತಪುರ | 0 | 0 | 32 | 32 | 0 | 32 | |
| 5 | ಜಯಮಹಲ್ ಬಡಾವಣೆ | 0 | 0 | 3 | 3 | 0 | 3 | |
| 6 | ಮಲ್ಲೇಶ್ವರಂ 5ನೇ ಕ್ರಾಸ್ | 0 | 0 | 3 | 3 | 0 | 3 | |
| 7 | ಮಲ್ಲೇಶ್ವರಂ 17ನೇ ಕ್ರಾಸ್ | 0 | 0 | 8 | 8 | 0 | 8 | |
| 8 | ಹೆಬ್ಬಾಳ | 0 | 0 | 45 | 45 | 0 | 45 | |
| 9 | ಜಯನಗರ | 0 | 0 | 102 | 100 | 2 | 102 | |
| 10 | ಯಡಿಯೂರು | 0 | 0 | 24 | 24 | 0 | 24 | |
| 11 | ಬಸವನಗುಡಿ | 0 | 0 | 3 | 3 | 0 | 3 | |
| 12 | ತ್ಯಾಗರಾಜನಗರ | 0 | 0 | 30 | 29 | 1 | 30 | |
| 13 | ಜೆ.ಪಿ.ನಗರ | 0 | 0 | 6 | 6 | 0 | 6 | |
| 14 | ಬನಶಂಕರಿ | 0 | 0 | 2 | 0 | 2 | 2 | |
| 15 | ಕೆಂಪೇಗೌಡನಗರ | 0 | 0 | 2 | 0 | 2 | 2 | |
| 16 | ಗಿರಿನಗರ | 0 | 0 | 6 | 3 | 3 | 6 | |
| 17 | ಸುಬ್ರಮಣ್ಯಪುರ | 0 | 0 | 40 | 40 | 0 | 40 | |
| 18 | ಲಾಜರ್ ರಸ್ತೆ ಫ್ರೇಜರ್ ಟೌನ್ | 0 | 0 | 157 | 157 | 0 | 157 | |
| 19 | ಕೋಲ್ಸ್ ರಸ್ತೆ ಫ್ರೇಜರ್ ಟೌನ್ | 0 | 0 | 12 | 11 | 1 | 12 | |
| 20 | ಮೋರ್ ರಸ್ತೆ ಫ್ರೇಜರ್ ಟೌನ್ | 0 | 0 | 36 | 36 | 0 | 36 | |
| 21 | ಜೋಗು ಪಾಳ್ಯ | 0 | 0 | 84 | 72 | 12 | 84 | |
| 22 | ಬ್ಲಾಕ್ ಪಲ್ಲಿ | 0 | 0 | 26 | 26 | 0 | 26 | |
| 23 | ಆರ್.ಕೆ.ಮಠ | 0 | 0 | 36 | 31 | 5 | 36 | |
| 24 | ಕಮರ್ಷಿಯಲ್ ಸ್ಟ್ರೀಟ್ | 0 | 0 | 12 | 12 | 0 | 12 | |
| 25 | ಕೆ.ಜಿ.ಹಳ್ಳಿ | 0 | 0 | 42 | 26 | 16 | 42 | |

| | | | | | | | | |
|---|---|---|---|---|---|---|---|---|
| 26 | ಬೈಯಪ್ಪನಹಳ್ಳಿ | 0 | 0 | 42 | 42 | 0 | 42 | |
| 27 | ಜೆ.ಬಿ ನಗರ | 6 | 0 | 0 | 6 | 0 | 6 | |
| 28 | ಸಿ.ಸಿ.ಬಿ ಹಿಂಭಾಗ | 0 | 0 | 14 | 6 | 8 | 14 | |
| 29 | ಅಶೋರ್ ಖಾನ್ ಕಾಟನ್ ಪೇಟೆ | 0 | 0 | 20 | 12 | 8 | 20 | |
| 30 | ಬ್ರಿಯಾಂಡ್ ವೃತ್ತ ಕಾಟನ್ ಪೇಟೆ | 0 | 0 | 96 | 81 | 15 | 96 | |
| 31 | ಬಿನ್ನಿಮಿಲ್ | 0 | 0 | 128 | 75 | 53 | 128 | |
| 32 | ಕೆಂಗೇರಿ | 0 | 0 | 229 | 161 | 68 | 229 | |
| 33 | ಕಂಗೇರಿ ಉಪ ನಗರ | 1 | 0 | 45 | 44 | 2 | 46 | 1 ಎ ವೃಂದದ ಮತ್ತು 1 ಸಿ ವೃಂದದ ವಸತಿಗೃಹಗಳ ಖಾಲಿ ಇರುತ್ತವೆ. |
| 34 | ಮಾಗಡಿ ರಸ್ತೆ | 0 | 0 | 500 | 493 | 7 | 500 | |
| 35 | ವಿಜಯನಗರ | 0 | 0 | 36 | 36 | 0 | 36 | |
| 36 | ಚಾಮರಾಜ ಪೇಟೆ | 0 | 0 | 12 | 12 | 0 | 12 | |
| 37 | ವೈಯಾಲಿಕಾವಲ್ | 0 | 0 | 4 | 3 | 1 | 4 | |
| 38 | ಆನಂದರಾವ್ ವೃತ್ತ | 0 | 0 | 264 | 262 | 2 | 264 | |
| 39 | ರಿಸಿಲ್ದಾರ್ ರಸ್ತೆ ಶೇಷಾದ್ರಿಪುರಂ | 0 | 0 | 48 | 46 | 2 | 48 | |
| 40 | ವೈ.ಜಿ ಪಾಳ್ಯ | 0 | 0 | 152 | 138 | 14 | 152 | |
| 41 | ಬರ್ಲಿನ್ ಸ್ಟ್ರೀಟ್ | 0 | 0 | 56 | 55 | 1 | 56 | |
| 42 | ಆಸ್ಟೀನ್ ಟೌನ್ | 3 | 1 | 386 | 181 | 209 | 390 | 2 ಸಿ ವೃಂದದ ವಸತಿಗೃಹಗಳು ಖಾಲಿ ಇರುವತ್ತವೆ |
| 43 | ಎಸ್.ಜೆ.ಪಾರ್ಕ್ | 0 | 0 | 2 | 2 | 0 | 2 | |
| 44 | ವಿಲ್ಸನ್‌ಗಾರ್ಡನ್ | 0 | 0 | 21 | 21 | 0 | 21 | |
| 45 | ವಿವೇಕನಗರ | 0 | 0 | 14 | 10 | 4 | 14 | |
| 46 | ನೀಲಸಂದ್ರ ಬಿ.ಡಿ.ಎ. | 0 | 0 | 9 | 6 | 3 | 9 | |
| 47 | ವಸಂತನಗರ | 0 | 0 | 42 | 41 | 1 | 42 | |
| 48 | ಯಲಹಂಕ | 0 | 0 | 27 | 21 | 6 | 27 | |
| 49 | ಪಿ.ಡಿ.ಎಂ.ಎಸ್.ಯಲಹಂಕ | 2 | 9 | 30 | 15 | 26 | 41 | 1 ಎ ವೃಂದ, 2 ಬಿ ವೃಂದ & 23 ಸಿ ವೃಂದದ ವಸತಿಗೃಹಗಳು ಖಾಲಿ ಇರುತ್ತವೆ. |
| 50 | ಎ.ಪಿ.ಟಿ.ಎಸ್.ಯಲಹಂಕ | 2 | 11 | 24 | 23 | 14 | 37 | 2 ಎ ವೃಂದ, 1 ಬಿ ವೃಂದ & 11 ಸಿ ವೃಂದದ ವಸತಿಗೃಹಗಳು ಖಾಲಿ ಇರುತ್ತವೆ. |
| 51 | ಯಲಹಂಕ ಉಪ ನಗರ | 0 | 0 | 429 | 199 | 230 | 429 | |
| 52 | ದೇವನಹಳ್ಳಿ | 0 | 0 | 68 | 10 | 58 | 68 | |
| 53 | ವಿದ್ಯಾರಣ್ಯಪುರ | 0 | 0 | 24 | 24 | 0 | 24 | |

| | | | | | | | | |
|---|---|---|---|---|---|---|---|---|
| 54 | ಮೈಕೋಲೇಔಟ್ | 0 | 0 | 12 | 12 | 0 | 12 | |
| 55 | ಮಡಿವಾಳ | 7 | 0 | 74 | 79 | 2 | 81 | 2 ಎ ವೃಂದದ ವಸತಿಗೃಹ ಖಾಲಿ ಇರುತ್ತದೆ |
| 56 | ಆಡುಗೋಡಿ | 2 | 1 | 173 | 174 | 2 | 176 | 2 ಸಿ ವೃಂದ ವಸತಿಗೃಹಗಳು ಖಾಲಿ ಇರುತ್ತವೆ. |
| 57 | ಮಹದೇವ ಪುರ | 0 | 0 | 52 | 52 | 0 | 52 | |
| 58 | ಹೆಚ್.ಎ.ಎಲ್ | 0 | 0 | 77 | 76 | 1 | 77 | |
| 59 | ಸಿರ್ಸಿ ವೃತ್ತ | 0 | 0 | 431 | 419 | 12 | 431 | |
| 60 | ಎಂ.ಎಸ್.ಬಿ ಲೇನ್ | 0 | 0 | 306 | 294 | 12 | 306 | |
| 61 | ಹೆಗ್ಗಡೆ ನಗರ (ಥಣಿಸಂದ್ರ) | 1 | 4 | 452 | 434 | 23 | 457 | 21 ಸಿ ವೃಂದದ & 2 ಬಿ ವೃಂದದ ವಸತಿಗೃಹ ಖಾಲಿ ಇರುತ್ತವೆ |
| 62 | ಸಂಪಿಗೆ ಹಳ್ಳಿ | 0 | 0 | 74 | 74 | 0 | 74 | |
| 63 | ಸಾಲು ಮನೆಗಳು, ಸಿಎಆರ್ ದಕ್ಷಿಣ | 0 | 0 | 512 | 512 | 0 | 512 | |
| 64 | ನಂದೀ ಸಂಕೀರ್ಣ, ಸಿಎಆರ್ ದಕ್ಷಿಣ | 0 | 0 | 321 | 321 | 0 | 321 | |
| 65 | ಟಿಪ್ಪು ಬ್ಲಾಕ್ ಸಿಎಆರ್ ದಕ್ಷಿಣ | 0 | 0 | 36 | 36 | 0 | 36 | |
| 66 | ಯಲಗೊಂಡನಪಾಳ್ಯ (ವೈ.ಜಿ ಪಾಳ್ಯ) | 0 | 0 | 58 | 58 | 0 | 58 | |
| 67 | ಕೃಷ್ಣ ಸಿಎಆರ್ ದಕ್ಷಿಣ | 0 | 0 | 24 | 24 | 0 | 24 | |
| 68 | ಕೋರಮಂಗಲ ಪಂಪ್ ಹೌಸ್ | 0 | 0 | 1 | 1 | 0 | 1 | |
| 69 | ಆಸ್ಟ್ರೇಲಿಯ ಮೈ ಪರ್ಲ್, ಸಿಎಆರ್ ದಕ್ಷಿಣ | 0 | 0 | 2 | 2 | 0 | 2 | |
| 70 | ಕಾವೇರಿ ಸಂಕೀರ್ಣ, ಸಿಎಆರ್ ದಕ್ಷಿಣ | 0 | 0 | 16 | 16 | 0 | 16 | |
| 71 | ಶರಾವತಿ ಸಂಕೀರ್ಣ, ಸಿಎಆರ್ ದಕ್ಷಿಣ | 0 | 0 | 30 | 30 | 0 | 30 | |
| 72 | ಫಾಸ್ಟ್ ಸ್ಟ್ರಾಕ್ ಟೆಕ್ನಾಲಜಿ, ಸಿಎಆರ್ ದಕ್ಷಿಣ | 0 | 0 | 8 | 8 | 0 | 8 | |
| 73 | ಹೊಸದಾಗಿ ನಿರ್ಮಾಣಗೊಂಡಿರುವ ವಸತಿಗೃಹ ಸಿಎಆರ್ ದಕ್ಷಿಣ | 0 | 0 | 192 | 140 | 52 | 192 | |

| | | | | | | | | |
|---|---|---|---|---|---|---|---|---|
| 74 | ಕೋರಮಂಗಲ | 0 | 16 | 1384 | 1273 | 127 | 1400 | 127 ಸಿ ವೃಂದ ವಸತಿಗೃಹಗಳು ಖಾಲಿ ಇರುತ್ತವೆ. |
| 75 | ಕೊಡ್ಲು | 0 | 0 | 580 | 349 | 231 | 580 | |
| 76 | ಇಂದಿರಾನಗರ | 0 | 0 | 38 | 35 | 3 | 38 | |
| 77 | ನೆಟ್ಟಕಲ್ಲಪ್ಪ | 0 | 0 | 4 | 4 | 0 | 4 | |
| 78 | ಶೂಲೆ ವೃತ್ತ | 12 | 0 | 0 | 11 | 1 | 12 | |
| 79 | ನೃಪತುಂಗ ರಸ್ತೆ | 1 | 0 | 0 | 1 | 0 | 1 | |
| | ಒಟ್ಟು | 24 | 43 | 8722 | 7459 | 1330 | 8789 | |

| | | ಅನುಬಂಧ-ಬಿ | | |
|---|---|---|---|---|
| ಕ್ರ.ಸಂ | ಪೊಲೀಸ್ ವಸತಿ ಗೃಹಗಳ ಹೆಸರು | ನಿರ್ಮಾಣಗೊಂಡಿರುವ ವಸತಿಗೃಹ ಸಂಖ್ಯೆ | ಹಂಚಿಕೆಯಾಗಿರುವ ವಸತಿಗೃಹ | ಹಂಚಿಕೆ ಮಾಡಲು ಬಾಕಿ ಇರುವ ವಸತಿಗೃರಹಗಳ ಸಂಖ್ಯೆ |
| 1 | ಸಿ.ಎ.ಆರ್ ಕೇಂದ್ರ ಬಿನ್ನಿಮಿಲ್ | 128 ಸಿಬ್ಬಂದಿ ವಸತಿಗೃಹ | 85 | 43 |
| 2 | ಕೆಂಗೇರಿ ಪೊಲೀಸ್ ವಸತಿಗೃಹ | 128 ಸಿಬ್ಬಂದಿ ವಸತಿಗೃಹ | 66 | 62 |
| 3 | ಆಡುಗೋಡಿ ಪೊಲೀಸ್ ವಸತಿಗೃಹ | 384 ಸಿಬ್ಬಂದಿ ವಸತಿಗೃಹಗಳು | 140 | 244 |
| 4 | ಕೆ.ಆರ್ ಪುರಂ ಪೊಲೀಸ್ ವಸತಿಗೃಹ | 198 ಸಿಬ್ಬಂದಿ ವಸತಿಗೃಹಗಳು | 150 | 48 |
| 5 | ಆಸ್ಟಿನ್ ಟೌನ್ ವಸತಿ ಗೃಹ | 192 ಸಿಬ್ಬಂದಿ ವಸತಿ ಗೃಹಗಳು | 0 | 192 |
| 6 | ಸಿರ್ಸಿ ಸರ್ಕಲ್ ಮೈಸೂರು ರಸ್ತೆ | 32 ಪಿಎಸ್ಐ ವಸತಿಗೃಹಗಳು | 32 | 0 |
| ಒಟ್ಟು | | | **473** | **589** |

BG-GPO/2515/WPP-47/2009-2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೪೬ | ಬೆಂಗಳೂರು, ಗುರುವಾರ, ಜುಲೈ ೭, ೨೦೧೧ (ಆಷಾಢ ೧೬, ಶಕ ವರ್ಷ ೧೯೩೩) | ಸಂಚಿಕೆ ೨೭ |
|---|---|---|

## ಭಾಗ – ೪ಎ

**ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.**

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಹೆಚ್‌ಡಿ 276 ಪೊಸೆಹ 2007, ಬೆಂಗಳೂರು, ದಿನಾಂಕ:17-06-2011

ಕರ್ನಾಟಕ ಸರ್ಕಾರವು, ಕರ್ನಾಟಕ ಪೊಲೀಸ್ ಅಧಿನಿಯಮ, 1963 (ಕರ್ನಾಟಕ ಅಧಿನಿಯಮ 1964ರ 4)ರ 30ನೇ ಪ್ರಕರಣ ಮತ್ತು 163ನೇ ಪ್ರಕರಣದೊಂದಿಗೆ ಓದಲಾದ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (ಕರ್ನಾಟಕ ಅಧಿನಿಯಮ 1990ರ 14)ರ 8ನೇ ಪ್ರಕರಣದೊಂದಿಗೆ ಓದಲಾದ 3ನೇ ಪ್ರಕರಣದ (1)ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿದಂತೆ ಕರ್ನಾಟಕ ಸರ್ಕಾರಿ (ಸಹಾಯಕ ಪೊಲೀಸ್ ಸೂಪರಿಂಟೆಂಡೆಂಟರ ದರ್ಜೆ ಮತ್ತು ಅದಕ್ಕಿಂತ ಮೇಲಿನ ಪೊಲೀಸ್ ಅಧಿಕಾರಿಗಳಿಗೆ ವಸತಿ ಗೃಹಗಳ ಹಂಚಿಕೆ) ನಿಯಮಗಳು, 2008ರ ಕರಡು ಮತ್ತು ಕರ್ನಾಟಕ ಸಿವಿಲ್ ಸೇವಾ ನಿಯಮಗಳ 75ನೇ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವೆಗಳ ಅಧಿನಿಯಮ, 1978ರ 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡ ಹಾಗೂ ಕರ್ನಾಟಕ ಪೊಲೀಸ್ ಅಧಿನಿಯಮ, 1963ರ 163ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ.

ನಿಯಮಗಳು

1. ಹೆಸರು, ಅನ್ವಯ ಮತ್ತು ಪ್ರಾರಂಭ.- (1) ಈ ನಿಯಮಗಳನ್ನು ಕರ್ನಾಟಕ ಸರ್ಕಾರಿ (ಸಹಾಯಕ ಪೊಲೀಸ್ ಸೂಪರಿಂಟೆಂಡೆಂಟರ ದರ್ಜೆ ಮತ್ತು ಅದಕ್ಕಿಂತ ಮೇಲಿನ ಪೊಲೀಸ್ ಅಧಿಕಾರಿಗಳ ವಸತಿ ಗೃಹಗಳ ಹಂಚಿಕೆ) ನಿಯಮಗಳು, 2011ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಕರ್ನಾಟಕ ಸಿವಿಲ್ ಸೇವೆಗಳ ನಿಯಮಗಳ IVನೇ ಪರಿಶಿಷ್ಟ ವಿಭಾಗಗಳೆಂದು ಬಳಸುವ ಸರ್ಕಾರಿ ಕಟ್ಟಡಗಳಿಗಾಗಿ, ಲೈಸೆನ್ಸು ಶುಲ್ಕ ನಿಯಮಗಳ 4-ಎ ನಿಯಮದ (ಇ)ನೇ ಖಂಡದ (4) ರಿಂದ (7)ನೇ ಬಾಬುಗಳಲ್ಲಿ ಸೂಚಿಸುವ ಅಧಿಕಾರಿಗಳನ್ನು ಹೊರತುಪಡಿಸಿ ಸಹಾಯಕ ಪೊಲೀಸ್ ಸೂಪರಿಂಟೆಂಡೆಂಟರುಗಳ ದರ್ಜೆ ಮತ್ತು ಅದಕ್ಕಿಂತ ಮೇಲಿನ ಅಧಿಕಾರಿಗಳಿಗೆ ಅನ್ವಯವಾಗತಕ್ಕದ್ದು. ಈ ನಿಯಮಗಳು ಪೊಲೀಸ್ ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರು ಅವರು ಇತ್ಯರ್ಥಪಡಿಸುವಂತೆ ಬೆಂಗಳೂರಿನಲ್ಲಿ ಇರುವ ಸರ್ಕಾರಿ ವಸತಿ ಗೃಹಗಳಿಗೆ ಅನ್ವಯಿಸತಕ್ಕದ್ದು.

(3) ಇವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.- (1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.-

(ಎ) "ಹಂಚಿಕೆ" ಎಂದರೆ ಲೈಸೆನ್ಸ್ ಪಡೆದ ಸಂದಾಯದ ಮೇಲೆ ವಾಸದ ಉದ್ದೇಶಕ್ಕಾಗಿ ಪೊಲೀಸ್ ಅಧಿಕಾರಿಗೆ, ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರೀಕ್ಷಕರು ಇತ್ಯರ್ಥಪಡಿಸುವ ಸರ್ಕಾರಿ ವಸತಿ ಗೃಹಗಳ ಹಂಚಿಕೆ;

(ಬಿ) "ಹಂಚಿಕೆಪಡೆದವ" ಎಂದರೆ ಈ ನಿಯಮಗಳ ಮೇರೆಗೆ ಸರ್ಕಾರಿ ವಸತಿಗೃಹಗಳನ್ನು ಯಾರಿಗೆ ಹಂಚಿಕೆ ಮಾಡಲಾಗಿದೆಯೋ ಆ ಪೊಲೀಸ್ ಅಧಿಕಾರಿ.

(ಸಿ) "ನಿಯಮಿಸಲಾದ ವಸತಿಗೃಹಗಳು" ಎಂದರೆ ಕರ್ನಾಟಕ ಸಿವಿಲ್ ಸೇವೆಗಳ ನಿಯಮಗಳ IVನೇ ಪರಿಶಿಷ್ಟದಲ್ಲಿ ನಿವಾಸಗಳೆಂದು ಬಳಸುವ ಸರ್ಕಾರಿ ಕಟ್ಟಡಗಳಿಗಾಗಿ ಲೈಸೆನ್ಸು ಶುಲ್ಕ ನಿಯಮಗಳ 4ಎ ನಿಯಮದ (vii) ನೇ ಖಂಡದ (4)ರಿಂದ (7)ನೇ ಬಾಬುಗಳಲ್ಲಿ ಸೂಚಿಸಿದ ಅಧಿಕಾರಿಗಳಿಗೆ ಹಂಚಿಕೆ ಮಾಡಲಾದ ಸರ್ಕಾರಿ ವಸತಿ ಗೃಹಗಳು.

(ಡಿ) "ಕುಟುಂಬ" ಎಂದರೆ ಪೊಲೀಸ್ ಅಧಿಕಾರಿಯ ಪತ್ನಿ ಅಥವಾ ಪತಿ, ಪೊಲೀಸ್ ಅಧಿಕಾರಿಯೊಂದಿಗಿರುವ ಮತ್ತು ಸಂಪೂರ್ಣವಾಗಿ ಅವಲಂಬಿತರಾಗಿ ವಾಸಿಸುವ ಆತನ ಸ್ವಂತ ಮಕ್ಕಳು ಮತ್ತು ಮಲಮಕ್ಕಳು.

(ಇ) "ಸರ್ಕಾರ" ಎಂದರೆ ರಾಜ್ಯ ಸರ್ಕಾರ.

(2) ಇಲ್ಲಿ ಬಳಸಲಾದ ಆದರೆ ಪರಿಭಾಷಿಸಿಲ್ಲದ ಎಲ್ಲಾ ಇತರ ಪದಗಳು ಮತ್ತು ವ್ಯಾಖ್ಯಾನಗಳಿಗೆ ಕರ್ನಾಟಕ ಸಿವಿಲ್ ಸೇವೆಗಳ ನಿಯಮಗಳು ಮತ್ತು ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿ ಕ್ರಮವಾಗಿ ಅವುಗಳಿಗೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

3. ಹಂಚಿಕೆ ಪಡೆಯಲು ಅರ್ಹತೆ.- (1) ಬೆಂಗಳೂರು ನಗರದಲ್ಲಿ ಯಾವುದೇ ಹುದ್ದೆಗೆ ನಿಯೋಜಿತಗೊಂಡಿರುವ ಸಹಾಯಕ ಪೊಲೀಸ್ ಸೂಪರಿಂಟೆಂಡೆಂಟ್‌ರ ದರ್ಜೆ ಮತ್ತು ಅದಕ್ಕೂ ಮೇಲಿನ ಅಧಿಕಾರಿಗಳ ನಗರ ಪೊಲೀಸ್ ಆಯುಕ್ತಾಲಯದಲ್ಲಿ ಅಥವಾ ಇಲಾಖೆಯ ಹೊರಗೆ ಎಕ್ಸ್‌ಕೇಡರ್ ಹುದ್ದೆಗಳನ್ನು ಒಳಗೊಂಡಂತೆ ಯಾವುದೇ ಇತರ ಹುದ್ದೆಗಳಾಗಿರಲಿ, ಇವರು ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಸ್ವಂತ ಮನೆ ಹೊಂದಿಲ್ಲದಿದ್ದರೆ ಈ ನಿಯಮಗಳ ಮೇರೆಗೆ ವಸತಿಗೃಹಗಳ ಹಂಚಿಕೆ ಪಡೆಯಲು ಅರ್ಹರಾಗುತ್ತಾರೆ.

(2) ಹಂಚಿಕೆಯನ್ನು, ಹಂಚಿಕೆ ಪಡೆಯುವ ಪೊಲೀಸ್ ಅಧಿಕಾರಿಯು ತನ್ನ ಹೆಸರಿನಲ್ಲಾಗಲಿ ಅಥವಾ ತನ್ನ ಪತ್ನಿಯ ಅಥವಾ ಅವಲಂಬಿತ ಮಕ್ಕಳ ಹೆಸರಿನಲ್ಲಾಗಲಿ ಬೆಂಗಳೂರು ಮಹಾನಗರ ಪಾಲಿಕೆ ಅಥವಾ ಬೆಂಗಳೂರು ನಗರದ ಉಪ-ನಗರಗಳಲ್ಲಿ ಸ್ವಂತ ಮನೆ ಹೊಂದಿಲ್ಲದಿರುವುದಕ್ಕೆ ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಥವಾ ಯಾವುದೇ ಇತರ ಸರ್ಕಾರಿ ಸಂಸ್ಥೆ ಅಥವಾ ಸಹಕಾರಿ ಸಂಘಗಳಿಂದ ಹಂಚಿಕೆಯಾದ ನಿವೇಶನದಲ್ಲಿ ನಿರ್ಮಿಸಿದ ಮನೆಯನ್ನು ಹೊಂದಿಲ್ಲದಿರುವ ಬಗ್ಗೆ ದೃಢೀಕರಣಪತ್ರವನ್ನು ಸಲ್ಲಿಸುವುದಕ್ಕೆ ಒಳಪಟ್ಟಿರತಕ್ಕದ್ದು. ಪೊಲೀಸ್ ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು, ಅಧಿಕಾರಿಯು, ಆತನ ಅಥವಾ ಆಕೆಯ ಪತಿ ಅಥವಾ ಪತ್ನಿ ಅಥವಾ ಅವಲಂಬಿತರು ಬೆಂಗಳೂರು ನಗರದಲ್ಲಿ ಅಥವಾ ಬೆಂಗಳೂರು ನಗರದ ಯಾವುದೇ ಉಪನಗರಗಳಲ್ಲಿ ಸ್ವಂತ ಮನೆ ಅಥವಾ ಫ್ಲಾಟ್ ಅನ್ನು ಹೊಂದಿರುವರೆ ಎಂಬುದನ್ನು ಖಚಿತಪಡಿಸಿಕೊಳ್ಳಲು ತಾವು ಅವಶ್ಯಕವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಬಹುದು ಹಾಗೂ ಅಂಥ ವಿಚಾರಣೆಯ ತರುವಾಯ, ಅವರು ಪೊಲೀಸ್ ಅಧಿಕಾರಿಗೆ ವಸತಿಗೃಹವನ್ನು ಹಂಚಿಕೆ ಮಾಡಬಹುದು ಹಾಗೂ ಈ ಬಗೆಗಿನ ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು. ಈ ಸಂಬಂಧದಲ್ಲಿ ಸುಳ್ಳು ದೃಢೀಕರಣಪತ್ರವನ್ನು ಒದಗಿಸಿದಂಥ ಯಾವುದೇ ಪೊಲೀಸ್ ಅಧಿಕಾರಿಯು ದುರ್ನಡತೆಗಾಗಿನ ಶಿಸ್ತು ಕ್ರಮಕ್ಕೆ ಗುರಿಯಾಗಬೇಕಾಗುತ್ತದೆ.

(3) ಗೃಹ ನಿರ್ಮಾಣ ಮುಂಗಡಗಳ ಸೌಲಭ್ಯವನ್ನು ಪಡೆದುಕೊಂಡಂಥ ಮತ್ತು ತರುವಾಯದಲ್ಲಿ ಅಂಥ ಆಸ್ತಿಯನ್ನು ವಿಲೆ ಮಾಡಿರುವಂಥ ಅಧಿಕಾರಿಗಳನ್ನು ಈ ನಿಯಮಗಳ ಮೇರೆಗೆ ವಸತಿಗೃಹಗಳ ಹಂಚಿಕೆಗಾಗಿ ಪರಿಗಣಿಸತಕ್ಕದ್ದಲ್ಲ.

(4) ಈ ನಿಯಮಗಳ ಮೇರೆಗೆ ಹಂಚಿಕೆ ಪಡೆದವನು ಹಂಚಿಕೆಯ ದಿನಾಂಕದಿಂದ ಗರಿಷ್ಠ ಐದು ವರ್ಷಗಳ ಅವಧಿಯವರೆಗೆ ವಸತಿಗೃಹಗಳಲ್ಲಿ ಇರಲು ಅನುಮತಿಸತಕ್ಕದ್ದು.

4. ಹಂಚಿಕೆಯ ಆದ್ಯತೆ.- (1) ಹಂಚಿಕೆಗಾಗಿ, ಲಭ್ಯವಿರುವ ವಸತಿಗೃಹಗಳ ಸಾಮಾನ್ಯ ಪಟ್ಟಿಯಿಂದ ಸರ್ಕಾರಿ ವಸತಿಗೃಹಗಳ ಹಂಚಿಕೆಯನ್ನು ಅರ್ಜಿಯ ನೋಂದಣಿಯ ದಿನಾಂಕವನ್ನು ಉಲ್ಲೇಖಿಸಿ ನಿರ್ಧರಿಸಲಾದ ಜ್ಯೇಷ್ಠತೆಯ ಆಧಾರದ ಮೇಲೆ ಮಾಡತಕ್ಕದ್ದು.

ಪರಂತು, ಒಂದಕ್ಕಿಂತ ಹೆಚ್ಚಿನ ಅರ್ಜಿಗಳು ಒಂದೇ ದಿನಾಂಕದಂದು ವಸತಿಗೃಹಗಳ ಹಂಚಿಕೆಗಾಗಿ ನೋಂದಣಿಯಾಗಿದ್ದರೆ, ಅರ್ಜಿದಾರರ ಪರಸ್ಪರ ಜ್ಯೇಷ್ಠತೆಯನ್ನು ಅವರ ವಯಸ್ಸನ್ನು ಆಧರಿಸಿ, ಅಂದರೆ ವಯಸ್ಸಿನಲ್ಲಿ ಹಿರಿಯನಾದ ವ್ಯಕ್ತಿಯನ್ನು ವಯಸ್ಸಿನಲ್ಲಿ ಕಿರಿಯನಾದ ವ್ಯಕ್ತಿಗಿಂತ ಹಿರಿಯನೆಂದು ನಿರ್ಧರಿಸತಕ್ಕದ್ದು.

(2) ಪೊಲೀಸ್ ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರ ಕಚೇರಿಯಲ್ಲಿರುವ ಕಟ್ಟಡಗಳ ವಿಭಾಗವು ಅರ್ಹ ಅರ್ಜಿದಾರರ ಹೆಸರನ್ನು ಈ ಉದ್ದೇಶಕ್ಕಾಗಿ ನಿರ್ವಹಿಸುತ್ತಿರುವ ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದು.

(3) ಹಂಚಿಕೆಯ ನಿಬಂಧನೆಗಳನುಸಾರ ವಸತಿ ಗೃಹಗಳನ್ನು ಹೊಂದುವುದಕ್ಕೆ ಅಧಿಕಾರಿಯು ನಿರಾಕರಿಸಿದಲ್ಲಿ, ಅವನು ತನ್ನ ಜ್ಯೇಷ್ಠತೆಯನ್ನು ಬಿಟ್ಟುಕೊಡತಕ್ಕದ್ದು. ಇವನ ಜ್ಯೇಷ್ಠತೆಯನ್ನು ಅವನು ಪುನಃ ಹೊಸದಾಗಿ ಅರ್ಜಿ ಸಲ್ಲಿಸಿದ ದಿನದಿಂದ ಲೆಕ್ಕ ಹಾಕತಕ್ಕದ್ದು. ಆದಾಗ್ಯೂ, ಈ ಮೊದಲು ಆತನ ಪರವಾಗಿ ಮಾಡಿದ ಹಂಚಿಕೆಯ ದಿನಾಂಕದಿಂದ ಒಂದು ವರ್ಷದ ಒಳಗೆ ಎರಡನೇ ಬಾರಿ ನೋಂದಣಿ ಮಾಡಲು ಅರ್ಹರಾಗಿರತಕ್ಕದ್ದಲ್ಲ.

5. ಈ ನಿಯಮಗಳ ಮೇರೆಗೆ ವಸತಿ ಗೃಹಗಳಿಗೆ ಅರ್ಹರಲ್ಲದ ಪೊಲೀಸ್ ಅಧಿಕಾರಿಗಳು ವಸತಿಗೃಹಗಳನ್ನು ಖಾಲಿ ಮಾಡತಕ್ಕದ್ದು.- ಈ ನಿಯಮಗಳು ಆರಂಭವಾಗುವುದಕ್ಕೆ ಮೊದಲೇ ವಸತಿ ಗೃಹಗಳಲ್ಲಿ ಇರುವ, ಆದರೆ ಈ ನಿಯಮಗಳ ಮೇರೆಗೆ ಅರ್ಹರಲ್ಲದ ಪೊಲೀಸ್ ಅಧಿಕಾರಿಗಳು,

ನಿಯಮಗಳು ಆರಂಭವಾದ ದಿನಾಂಕದಿಂದ ಅರವತ್ತು ದಿನಗಳ ಅವಧಿಯ ಒಳಗಾಗಿ ವಸತಿಗೃಹಗಳನ್ನು ಖಾಲಿ ಮಾಡತಕ್ಕದ್ದು, ತಪ್ಪಿದಲ್ಲಿ ಈ ನಿಯಮಗಳ 9ನೇ ನಿಯಮದ ಮೇರೆಗೆ ದಂಡ ಲೈಸೆನ್ಸ್ ಶುಲ್ಕವನ್ನು ಕಟ್ಟಲು ಗುರಿಯಾಗತಕ್ಕದ್ದು.

6. ಲೈಸೆನ್ಸ್ ಶುಲ್ಕದ ಸಂದಾಯ.- (1) ಹಂಚಿಕೆ ಪಡೆದವನು ತನ್ನ ಒಟ್ಟು ಮಾಸಿಕ ವೇತನದ ಶೇಕಡ ಹತ್ತರಷ್ಟು ಅಥವಾ ತಾನು ಪಡೆಯುವ ಮನೆ ಬಾಡಿಗೆ ಭತ್ಯೆಗೆ ಸಮನಾದ ಮೊತ್ತ ಇದರಲ್ಲಿ ಯಾವುದು ಹೆಚ್ಚೋ ಅದನ್ನು ಲೈಸೆನ್ಸ್ ಶುಲ್ಕವಾಗಿ ಸಂದಾಯ ಮಾಡತಕ್ಕದ್ದು.

(2) 9ನೇ ನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಹಂಚಿಕೆ ಪಡೆದವನು ಅಥವಾ ಅವನ ಕುಟುಂಬದ ಯಾರೇ ಸದಸ್ಯನು ಸ್ವಂತ ಮನೆಯನ್ನು ಹೊಂದಿದ ತರುವಾಯವು ವಸತಿ ಗೃಹಗಳನ್ನು ತೆರವು ಗೊಳಿಸದಿದ್ದರೆ, ಸರಕಾರಿ ವಸತಿಗೃಹಗಳಿಗಾಗಿನ ಲೈಸೆನ್ಸ್ ಶುಲ್ಕವು ಅವನು ತನ್ನ ಮನೆಯಿಂದ ಪಡೆಯುವ ಬಾಡಿಗೆ ಮೊತ್ತಕ್ಕೆ ಸಮನಾದ ಲೈಸೆನ್ಸ್ ಶುಲ್ಕವನ್ನು ಸಂದಾಯ ಮಾಡಲು ಗುರಿಯಾಗತಕ್ಕದ್ದು.

7. ಹಂಚಿಕೆಯನ್ನು ರದ್ದು ಮಾಡುವುದು.- (1) ಈ ಮುಂದಿನ ಸಂದರ್ಭಗಳಲ್ಲಿ, ಹಂಚಿಕೆ ಪಡೆದವನ, ಹಂಚಿಕೆಯನ್ನು ರದ್ದು ಮಾಡಲಾಗಿದೆ ಎಂದು ಭಾವಿಸತಕ್ಕದ್ದು;

(ಎ) ಸರ್ಕಾರಿ ಸೇವೆಯಿಂದ ನಿವೃತ್ತನಾಗುವುದು;

(ಬಿ) ಯಾವುದೇ ಕಾರಣಕ್ಕಾಗಿ ಪೊಲೀಸ್ ಸೇವೆಗೆ ರಾಜೀನಾಮೆ ನೀಡುವುದು ಅಥವಾ ಸೇವೆಯನ್ನು ಮುಕ್ತಾಯಗೊಳಿಸುವುದು;

(ಸಿ) ಹಂಚಿಕೆಯಾದ ದಿನಾಂಕದಿಂದ ಎಂಟು ದಿನಗಳ ಒಳಗಾಗಿ ಭದ್ರತಾ ಠೇವಣಿಯನ್ನು ಪಾವತಿಸಿದ ನಂತರ ಹಂಚಿಕೆಯ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅವನಿಗೆ ಹಂಚಿಕೆಯಾದ ವಸತಿ ಗೃಹವನ್ನು ಸ್ವಾಧೀನಪಡಿಸಿಕೊಳ್ಳಲು ವಿಫಲನಾಗಿರುವುದು;

(ಡಿ) ಅವನಿಗೆ ಹಂಚಿಕೆಯಾದ ವಸತಿಗೃಹವನ್ನು ಉಪ-ಬಾಡಿಗೆಗೆ ನೀಡಿರುವುದು ಅಥವಾ ಅನಧಿಕೃತ ವ್ಯಕ್ತಿಗಳು ಸ್ವಾಧೀನಹೊಂದಲು ಅನುಮತಿಸಿರುವುದು.

(2) ಹಂಚಿಕೆಯನ್ನು ರದ್ದು ಮಾಡಿದ ಅಥವಾ ಹಂಚಿಕೆಯು ರದ್ದು ಮಾಡಲಾಗಿದೆ ಎಂದು ಭಾವಿಸಿದ ದಿನಾಂಕದಿಂದ ಮೂವತ್ತು ದಿನಗಳು ಮೀರದ ಅವಧಿಗಾಗಿ ವಸತಿಗೃಹಗಳಲ್ಲಿ ಉಳಿದುಕೊಳ್ಳಲು ಹಂಚಿಕೆ ಪಡೆದವನನ್ನು ಅನುಮತಿಸಬಹುದು. ಹಂಚಿಕೆ ಪಡೆದವನು, ಮೂವತ್ತು ದಿನಗಳ ಅವಧಿ ಮೀರಿದ ತರುವಾಯವೂ ತೆರವುಗೊಳಿಸಲು ವಿಫಲನಾದ ಸಂದರ್ಭದಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ, 1963ರ 30ನೇ ಪ್ರಕರಣದ ಮೇರೆಗೆ ಹಂಚಿಕೆ ಪಡೆದವನು, ಹೊರ ಹಾಕುವುದಕ್ಕೆ ಗುರಿಯಾಗತಕ್ಕದ್ದು.

8. ಹಂಚಿಕೆ ಪಡೆದವನ ವರ್ಗಾವಣೆ.- (1) ಹಂಚಿಕೆ ಪಡೆದವನು ಬೆಂಗಳೂರಿನಿಂದ ಬೇರೆ ಕಡೆ ವರ್ಗಾವಣೆಗೊಂಡಾಗ, ಅವನು ಅಂಥ ವರ್ಗಾವಣೆಯಾದ ದಿನಾಂಕದಿಂದ ಮೂವತ್ತು ದಿನಗಳೊಳಗೆ ವಸತಿ ಗೃಹವನ್ನು ತೆರವುಗೊಳಿಸತಕ್ಕದ್ದು.

(2) ಸಾಮಾನ್ಯ ಲೈಸೆನ್ಸ್ ಶುಲ್ಕದ ಸಂದಾಯದ ಮೇಲೆ ವರ್ಗಾವಣೆಯ ದಿನಾಂಕದಿಂದ ಮೂವತ್ತು ದಿನಗಳು ಮೀರದಂತೆ ವಸತಿ ಗೃಹಗಳ ಸ್ವಾಧೀನದಲ್ಲಿರಲು ಹಂಚಿಕೆ ಪಡೆದವನನ್ನು ಅನುಮತಿಸಬಹುದು.

ಪರಂತು, ವಸತಿಗೃಹದ ಸ್ವಾಧೀನ ಹೊಂದಿರುವ ಹಂಚಿಕೆಪಡೆದವನು ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಬೆಂಗಳೂರಿನಿಂದ ಬೇರೆ ಕಡೆಗೆ ವರ್ಗಾವಣೆಗೊಂಡರೆ, ಪೊಲೀಸು ಮಹಾ ನಿರ್ದೇಶಕರು ಮತ್ತು ಪೊಲೀಸು ಮಹಾ ನಿರೀಕ್ಷಕರು, ಹಂಚಿಕೆಪಡೆದವನ ಕೋರಿಕೆಯ ಮೇರೆಗೆ ಸಾಮಾನ್ಯ ಲೈಸೆನ್ಸ್ ಶುಲ್ಕದ ಮೇಲೆ ಆ ಶೈಕ್ಷಣಿಕ ವರ್ಷದ ಮುಕ್ತಾಯವಾಗುವವರೆಗೆ ಸ್ವಾಧೀನದಲ್ಲಿ ಮುಂದುವರೆಯಲು ಅನುಮತಿಸಬಹುದು.

9. ದಂಡ ಲೈಸೆನ್ಸು ಶುಲ್ಕ.- (1) 5ನೇ ನಿಯಮ ಮತ್ತು 7ನೇ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿದಂಥ, ವಸತಿ ಗೃಹಗಳಲ್ಲಿನ ಸ್ವಾಧೀನವನ್ನು ಮುಂದುವರಿಸಿದ ಹಂಚಿಕೆಪಡೆದವನು ಈ ಮುಂದಿನ ದರಗಳಲ್ಲಿ ದಂಡ ಲೈಸೆನ್ಸು ಶುಲ್ಕವನ್ನು ಪಾವತಿ ಮಾಡಲು ಗುರಿಯಾಗತಕ್ಕದ್ದು, ಎಂದರೆ:

ಕೋಷ್ಟಕ

| ಕ್ರ ಸಂ. | ಅವಧಿ | ಲೈಸೆನ್ಸು ಶುಲ್ಕದ ದರ |
|---|---|---|
| (1) | (2) | (3) |
| (ಎ) | ಮೊದಲ ತಿಂಗಳಿಗಾಗಿ | ಸಾಮಾನ್ಯ ಲೈಸೆನ್ಸ್ ಶುಲ್ಕದ ಎರಡರಷ್ಟು |
| (ಬಿ) | ಎರಡನೆ ಮತ್ತು ಮೂರನೆ ತಿಂಗಳಿಗಾಗಿ | ಸಾಮಾನ್ಯ ಲೈಸೆನ್ಸ್ ಶುಲ್ಕದ ಮೂರರಷ್ಟು |
| (ಸಿ) | ಮೂರು ತಿಂಗಳನ್ನು ಮೀರಿದ ನಂತರ ವಸತಿಗೃಹದಿಂದ ಹೊರಹಾಕುವವರೆಗೆ/ತೆರವುಗೊಳಿಸುವವರೆಗಿನ ಅವಧಿಗಾಗಿ | ಸಾಮಾನ್ಯ ಲೈಸೆನ್ಸ್ ಶುಲ್ಕದ ಐದರಷ್ಟು |

(2) ದಂಡ ಲೈಸೆನ್ಸ್ ಶುಲ್ಕದ ಜೊತೆಗೆ, ಅವನನ್ನು ಕರ್ನಾಟಕ ಪೊಲೀಸ್ ಅಧಿನಿಯಮ, 1963ರ 30ನೇ ಪ್ರಕರಣದ ಪ್ರಕಾರ ಅವನು ಹೊರಹಾಕುವುದಕ್ಕೆ ಗುರಿಯಾಗತಕ್ಕದ್ದು.

10. ಯಾರಿಂದ ಲೈಸೆನ್ಸ್ ಶುಲ್ಕವನ್ನು ವಿಧಿಸಲಾಗುತ್ತದೆ.- ಸಾಮಾನ್ಯ ಪಟ್ಟಿಯ ವಸತಿ ಗೃಹಗಳ ಮೇಲ್ವಿಚಾರಣೆಯಲ್ಲಿರುವ ಕಮಾಂಡೆಂಟ್, ಮೊದಲನೇ ಬೆಟಾಲಿಯನ್, ಕರ್ನಾಟಕ ರಾಜ್ಯ ಮೀಸಲು ಪೊಲೀಸ್, ಬೆಂಗಳೂರು ಇವರಿಂದ ಹಂಚಿಕೆಪಡೆದವನ ವಸತಿಗೃಹಗಳ ಸ್ವಾಧೀನ ಪಡೆದುಕೊಂಡ ದಿನಾಂಕದಿಂದ ವಸತಿ ಗೃಹಗಳ ಲೈಸೆನ್ಸ್ ಶುಲ್ಕವನ್ನು ವಿಧಿಸತಕ್ಕದ್ದು.

11. ಹಂಚಿಕೆಪಡೆದವನು ಬೀಗದ ಕೀಯನ್ನು ಹಸ್ತಾಂತರಿಸುವುದು.- ಹಂಚಿಕೆ ಪಡೆದವನು, ತನ್ನ ಹಂಚಿಕೆಗಳ ಅವಧಿಯು ಮುಕ್ತಾಯಗೊಂಡ ಮೇಲೆ, ಕಮಾಂಡೆಂಟ್, ಮೊದಲ ಬೆಟಾಲಿಯನ್, ಕರ್ನಾಟಕ ರಾಜ್ಯ ಮೀಸಲು ಪೊಲೀಸ್, ಬೆಂಗಳೂರು ಇವರಿಗೆ ವಸತಿ ಗೃಹದ ಬೀಗದ ಕೀಯ ಹಸ್ತಾಂತರಿಸತಕ್ಕದ್ದು.

12. ಹಂಚಿಕೆ ಪಡೆದವನಿಂದ ಉಪದ್ರವ, ಇತ್ಯಾದಿಗಳು.- ಯಾರೇ ಹಂಚಿಕೆ ಪಡೆದವನು ವಸತಿಗೃಹಗಳ ಆವರಣಗಳಲ್ಲಿ ಉಪದ್ರವದಂತ ಯಾವುದೇ ಕೃತ್ಯ ಮಾಡಿದರೆ ಅಥವಾ ಯಾರೇ ಇತರ ವ್ಯಕ್ತಿಯು ಮಾಡಲು ಅನುಮತಿಸಿದರೆ, ಯಾವುದೇ ನೋಟೀಸು ಇಲ್ಲದೆಯೇ ಹೊರಹಾಕಲು ಅವನು ಗುರಿಯಾಗುತ್ತಾನೆ.

ವಿವರಣೆ.- "ಉಪದ್ರವ" ಪದವು ಕರ್ನಾಟಕ ಪೊಲೀಸ್ ಅಧಿನಿಯಮ 1963ರ 92ನೇ ಪ್ರಕರಣದಲ್ಲಿ ನೀಡಲಾದಂತ ಅರ್ಥವನ್ನು ಹೊಂದಿರತಕ್ಕದ್ದು. ಹಂಚಿಕೆ ಮಾಡಲಾದ ಉದ್ದೇಶವನ್ನು ಹೊರತುಪಡಿಸಿ ಯಾವುದೇ ಬೇರೆ ಉದ್ದೇಶಕ್ಕಾಗಿ ಆವರಣ ಬಳಕೆಯು ಸಹ ಇದರಲ್ಲಿ ಒಳಗೊಳ್ಳುತ್ತದೆ.

13. ಲೈಸೆನ್ಸ್ ಶುಲ್ಕ ಇತ್ಯಾದಿಗಳ ವಸೂಲಿಗೆ ಸಂಬಂಧಿಸಿದಂತೆ ಇಲಾಖಾ ಮುಖ್ಯಸ್ಥರು/ಬಟವಾಡೆ ಅಧಿಕಾರಿಗಳ ಜವಾಬ್ದಾರಿ.- (1) ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಅಥವಾ ಬಟವಾಡೆ ಅಧಿಕಾರಿಯು, ಹಂಚಿಕೆ ಪಡೆದವನಿಂದ ಪ್ರತಿ ತಿಂಗಳು ಅವನ ವೇತನದ ಬಿಲ್ಲಿನಿಂದ ಲೈಸೆನ್ಸ್ ಶುಲ್ಕವನ್ನು ವಸೂಲಿ ಮಾಡಲು ಮತ್ತು ಸಂಬಂಧಿಸಿದ ಹಂಚಿಕೆ ಪಡೆದವನು ವರ್ಗಾವಣೆ ಅಥವಾ ನಿವೃತ್ತಿ ಅಥವಾ ಮರಣ ಅಥವಾ ಯಾವುದೇ ಕಾರಣಕ್ಕಾಗಿ ಅವನ ಸೇವೆಯು ಮುಕ್ತಾಯಗೊಂಡಿದ್ದರೆ ಆ ಸಂಗತಿಯನ್ನು ಕೂಡಲೇ ಕಮಾಂಡೆಂಟ್, ಮೊದಲನೇ ಬೆಟಾಲಿಯನ್, ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಬೆಂಗಳೂರು ಮತ್ತು ಸಂಬಂಧಪಟ್ಟ ಕಾರ್ಯ ನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಇವರಿಗೆ ತಿಳಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

(2) ಹಂಚಿಕೆಪಡೆದವನು, ತಾನು ಹೊಂದಿರುವ ವಸತಿ ಗೃಹಗಳ ಸಂಬಂಧದಲ್ಲಿ ಹಿಂದಿನ ತಿಂಗಳಿಗಾಗಿನ ಲೈಸೆನ್ಸ್ ಶುಲ್ಕವನ್ನು ತನ್ನ ವೇತನದ ಬಿಲ್ಲಿನಿಂದ ನಿಯತವಾಗಿ ಕಡಿತ ಮಾಡಲಾಗುತ್ತಿದೆ ಎಂಬುದನ್ನು ಸೂಚಿಸಿ ಪ್ರಮಾಣಪತ್ರವೊಂದನ್ನು ಸಂಬಂಧಪಟ್ಟ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರಿಗೆ ಸಲ್ಲಿಸತಕ್ಕದ್ದು. ಹಂಚಿಕೆ ಪಡೆದವನು ಸ್ವತಃ ಬಟವಾಡೆ ಅಧಿಕಾರಿಯಾಗಿರುವ ಪ್ರಕರಣದಲ್ಲಿ ಸಂಬಂಧಪಟ್ಟ ಬಟವಾಡೆ ಅಧಿಕಾರಿಯು ಒಪ್ಪಿಗೆ ಸಹಿಯನ್ನು ಅಂಥ ಪ್ರಮಾಣಪತ್ರವು ಹೊಂದಿರತಕ್ಕದ್ದು.

(3) ಹಂಚಿಕೆ ಪಡೆದವನು ವೇತನವನ್ನು ಬಟವಾಡೆಯಿಂದ ತೆಗೆಯುವ ಪ್ರತಿ ತ್ರೈಮಾಸಿಕದ ಕೊನೆಯಲ್ಲಿ (ಅಂದರೆ ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್) ಸಂಬಂಧಪಟ್ಟ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರಿಗೆ ತಾನು ಹೊಂದಿದ ವಸತಿಗೃಹಗಳಿಗಾಗಿ ಲೈಸೆನ್ಸ್ ಶುಲ್ಕವನ್ನು ಹಿಂದಿನ ತಿಂಗಳಿಗಾಗಿ ತನ್ನ ವೇತನದಿಂದ ಕಡಿತ ಮಾಡಲಾಗಿದೆ ಎಂಬ ಬಗ್ಗೆ ಒಂದು ಪ್ರಮಾಣಪತ್ರವನ್ನು ಸಲ್ಲಿಸತಕ್ಕದ್ದು.

(4) ಬಟವಾಡೆ ಅಧಿಕಾರಿಯು ವಸತಿಗೃಹಗಳ ಲೈಸೆನ್ಸ್ ಶುಲ್ಕದ ಮಾಸಿಕ ವಸೂಲಿ ವಿವರಣೆಯನ್ನು ನಮೂನೆ ಕೆಎಫ್‌ಸಿ ಸಂ.7 (ಅನುಬಂಧ-II) ರಲ್ಲಿ ಮತ್ತು ನೀರು ಸರಬರಾಜು ಬಿಲ್ಲುಗಳ ಪ್ರತಿಗಳನ್ನು ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಗೆ ತರುವಾಯದ ತಿಂಗಳ 10ನೇ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ತಪ್ಪದೆ ನಿಯತವಾಗಿ ಕಳುಹಿಸತಕ್ಕದ್ದು.

(5) ಬಟವಾಡೆ ಅಧಿಕಾರಿಯು ಮೇಲೆ ಹೇಳಲಾದಂಶಗಳ ಬಗ್ಗೆ ತಿಳಿಸಲು ವಿಫಲಗೊಂಡಲ್ಲಿ, ಸಂಬಂಧಪಟ್ಟ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರು ಅವಶ್ಯಕ ಕ್ರಮಕ್ಕಾಗಿ ಪೊಲೀಸ್ ಮಹಾನಿರ್ದೇಶಕರು ಮತ್ತು ಮಹಾ ನಿರೀಕ್ಷಕರ ಗಮನಕ್ಕೆ ಈ ಸಂಗತಿಯನ್ನು ತರತಕ್ಕದ್ದು.

14. ಠೇವಣಿಗಳು.- ಹಂಚಿಕೆ ಪಡೆದವನು, ಹಂಚಿಕೆಯ ದಿನಾಂಕದಿಂದ ಏಳು ದಿವಸಗಳ ಒಳಗಾಗಿ ಕಮಾಂಡೆಂಟ್, ಮೊದಲನೇ ಬೆಟಾಲಿಯನ್, ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಬೆಂಗಳೂರು ಇವರಲ್ಲಿ ರೂ.1000/- ವನ್ನು ಪ್ರಾರಂಭಿಕ ಭದ್ರತೆ ಠೇವಣಿಯನ್ನು ಇಡತಕ್ಕದ್ದು.

15. ವಸತಿ ಗೃಹಗಳ ಉಸ್ತುವಾರಿ.- (1) ಹಂಚಿಕೆ ಪಡೆದವನು, ತನಗೆ ಹಂಚಿಕೆಯಾದ ವಸತಿ ಗೃಹಗಳ ಸ್ವಾಧೀನದಲ್ಲಿರುವಾಗ, ವಸತಿ ಗೃಹಗಳ ಸೂಕ್ತ ಉಸ್ತುವಾರಿ ಮತ್ತು ನಿರ್ವಹಣೆಗೆ ಜವಾಬ್ದಾರನಾಗಿರತಕ್ಕದ್ದು.

(2) ಹಂಚಿಕೆ ಪಡೆದವನು ವಸತಿ ಗೃಹಗಳ ವಿದ್ಯುಚ್ಛಕ್ತಿ ಮತ್ತು ನೀರು ಬಳಕೆಯ ಸಂಬಂಧದಲ್ಲಿ ಎಲ್ಲ ಬಿಲ್ಲುಗಳ ಪಾವತಿಯನ್ನು ಮಾಡತಕ್ಕದ್ದು.

16. ಹಂಚಿಕೆ ಪಡೆದವನ ಮರಣ.- ಹಂಚಿಕೆಪಡೆದವನು, ಸೇವೆಯಲ್ಲಿರುವಾಗ ಮರಣ ಹೊಂದಿದ ಸಂದರ್ಭದಲ್ಲಿ, ಅವನ ಕುಟುಂಬದ ಸದಸ್ಯರನ್ನು ಸಾಮಾನ್ಯ ಲೈಸೆನ್ಸ್ ಶುಲ್ಕದ ಮೇಲೆ ಹಂಚಿಕೆ ಪಡೆದವನ ಮರಣದ ದಿನಾಂಕದಿಂದ ಆರು ತಿಂಗಳುಗಳ ಅವಧಿಗಾಗಿ ವಸತಿಗೃಹಗಳಲ್ಲಿ ಮುಂದುವರಿಯಲು ಅನುಮತಿಸಬಹುದು.

17. ವಸತಿಗೃಹಗಳ ನಿರ್ವಹಣೆ.- ಲೋಕೋಪಯೋಗಿ ಇಲಾಖೆಯ ಸಂಬಂಧಪಟ್ಟ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರು ಈ ನಿಯಮಗಳ ಅಡಿಯಲ್ಲಿ ಬರುವ ವಸತಿಗೃಹಗಳ ನಿರ್ವಹಣೆಯ ಮೇಲ್ವಿಚಾರಣೆ ಹೊಂದಿದ್ದು ವಾರ್ಷಿಕ ದುರಸ್ತಿ ಮತ್ತು ನಿರ್ವಹಣೆಯನ್ನು ಕೈಗೊಳ್ಳತಕ್ಕದ್ದು ಮತ್ತು ವಸತಿಗೃಹಗಳ ನಿರ್ವಹಣಾ ಕಾಮಗಾರಿಯನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖಾ ಅಧಿಕಾರಿಗಳನ್ನು ಹಂಚಿಕೆ ಪಡೆದವನು ಅನುಮತಿಸತಕ್ಕದ್ದು.

18. ಒಳಬಾಡಿಗೆ ಮತ್ತು ಅನಧಿಕೃತ ಸ್ವಾಧೀನ.- ಹಂಚಿಕೆ ಪಡೆದವನು ತನಗೆ ಹಂಚಿಕೆಯಾದ ವಸತಿಗೃಹಗಳನ್ನು ಒಳಬಾಡಿಗೆಗೆ ನೀಡಿದ್ದರೆ,-

(ಎ) ಅನಧಿಕೃತ ಅಧಿಭೋಗದಾರ/ಅಧಿಭೋಗದಾರರು ಅಥವಾ ಒಳಬಾಡಿಗೆದಾರನನ್ನು ಯಾವುದೇ ನೋಟೀಸು ನೀಡದೆ ಕೂಡಲೇ ಹೊರಹಾಕತಕ್ಕದ್ದು.

[illegible]

(4) [illegible]

19. ವಸತಿ ಗೃಹಗಳ ಹಂಚಿಕೆಯ ಬಗ್ಗೆ ತಿದ್ದುಪಡಿ.- ಈ ನಿಯಮಗಳ ಮೇಲಿನ [illegible] ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರೀಕ್ಷಕರು [illegible].

20. ಕರ್ನಾಟಕ ಸಿವಿಲ್ ಸೇವೆಗಳ ನಿಯಮಗಳ ತಿದ್ದುಪಡಿ.- ಕರ್ನಾಟಕ ಸಿವಿಲ್ ಸೇವಾ ನಿಯಮಗಳ ೭-ಎ ನಿಯಮದ ಅನುಬಂಧ -ಇರಲ್ಲಿ ವಸತಿಗಳು ಎಂದು ಬಳಸುವ ಸರ್ಕಾರಿ ಕಟ್ಟಡಗಳಿಗೆ ಲೈಸೆನ್ಸ್ ಶುಲ್ಕ ನಿಯಮಗಳನ್ನು, ಖಂಡ (vi) ರಲ್ಲಿ (4) (5) ಮತ್ತು (6)ನೇ ಬಾಬುಗಳ ಬದಲಾಗಿ ಈ ಮುಂದಿನವುಗಳನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

(4) ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ.

(5) ಪೊಲೀಸ್ ಆಯುಕ್ತರು, ಬೆಂಗಳೂರು ನಗರ.

(6) ಪೊಲೀಸ್ ಆಯುಕ್ತರು, ಮೈಸೂರು ನಗರ.

(6ಎ) ಪೊಲೀಸ್ ಆಯುಕ್ತರು, ಹುಬ್ಬಳ್ಳಿ ಧಾರವಾಡ ನಗರ.

(6ಬಿ) ವಲಯಗಳ ಪೊಲೀಸ್ ಮಹಾ ನಿರೀಕ್ಷಕರು.

21. ಸರ್ಕಾರಿ ನೌಕರರ ವಸತಿಗಳು ಎಂದು ಬಳಸುವ ಸರ್ಕಾರಿ ಕಟ್ಟಡಗಳ ಹಂಚಿಕೆ ಮತ್ತು ಲೈಸೆನ್ಸ್ ಶುಲ್ಕ ವಿಧಿಸುವ ನಿಯಮಗಳು 2001ರ ತಿದ್ದುಪಡಿ.- ಸರ್ಕಾರಿ ನೌಕರರ ವಸತಿಗಳು ಎಂದು ಬಳಸುವ ಸರ್ಕಾರಿ ಕಟ್ಟಡಗಳ ಹಂಚಿಕೆ ಮತ್ತು ಲೈಸೆನ್ಸ್ ಶುಲ್ಕ ವಿಧಿಸುವ ನಿಯಮಗಳು 2001ರ 16ನೇ ನಿಯಮದ (1) ಮತ್ತು (2)ನೇ ಉಪ-ನಿಯಮಗಳನ್ನು ಬಿಟ್ಟುಬಿಡತಕ್ಕದ್ದು.

22. ನಿರಸನ ಮತ್ತು ಉಳಿಸುವಿಕೆಗಳು.- (1) ಕರ್ನಾಟಕ ಸರ್ಕಾರ (ಸಹಾಯಕ ಪೊಲೀಸ್ ಸೂಪರಿಂಟೆಂಡೆಂಟ್ ಮತ್ತು ಉಪ ಪೊಲೀಸ್ ಸೂಪರಿಂಟೆಂಡೆಂಟ್ ದರ್ಜೆಗಳು ಮತ್ತು ಅದಕ್ಕಿಂತ ಮೇಲಿನ ಪೊಲೀಸ್ ಅಧಿಕಾರಿಗಳಿಗೆ ವಸತಿಗೃಹಗಳ ಹಂಚಿಕೆ) ನಿಯಮಗಳು 2005 ಮತ್ತು ಈ ಸಂಬಂಧದಲ್ಲಿ ಈ ಮೊದಲು ಹೊರಡಿಸಲಾದ ಯಾವುದೇ ಆದೇಶಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

ಪರಂತು, ಹಾಗೆ ನಿರಸನವು ಸದರಿ ನಿಯಮಗಳ ಈ ಹಿಂದಿನ ಜಾರಿ ಅಥವಾ ಅದರ ಮೇರೆಗೆ ಕೈಗೊಳ್ಳಲಾದ ಅಥವಾ ಉಂಟಾದ ಯಾವುದರ ಮೇಲಾಗಲಿ ಪರಿಣಾಮ ಉಂಟು ಮಾಡತಕ್ಕದ್ದಲ್ಲ ಅಥವಾ ಸದರಿ ನಿಯಮಗಳ ಮೇರೆಗೆ, ಅರ್ಜಿಸಿದ, ಪ್ರಾಪ್ತವಾದ ಅಥವಾ ಗುರಿಯಾದ ಯಾವುದೇ ಹಕ್ಕು, ವಿಶೇಷ ಅಥವಾ ಹೊಣೆಗಾರಿಕೆ ಅನ್ವಯವಾಗತಕ್ಕದ್ದಲ್ಲ.

(2) (1)ನೇ ಉಪ-ನಿಯಮದಿಂದ ನಿರಸನಗೊಂಡ ನಿಯಮಗಳಿಗೆ ಯಾವುದೇ ನಿಯಮ ಅಥವಾ ಆದೇಶದಲ್ಲಿನ ಯಾವುದೇ ಪರಾಮರ್ಶೆಯು ಈ ನಿಯಮಗಳಿಗೆ ಪರಾಮರ್ಶೆ ಎಂದು ಅರ್ಥೈಸತಕ್ಕದ್ದು.

(3) (1)ನೇ ಉಪ ನಿಯಮದ ಮೇರೆಗೆ ನಿರಸನಗೊಂಡ ನಿಯಮಗಳ ಅಡಿಯಲ್ಲಿ ಪ್ರಾರಂಭಿಸಿದ ಎಲ್ಲಾ ವ್ಯವಹರಣೆಗಳು ಮತ್ತು ಈ ನಿಯಮಗಳ ಪ್ರಾರಂಭದ ದಿನಾಂಕದಂದು ಬಾಕಿ ಇರುವವು ಈ ನಿಯಮಗಳ ಉಪಬಂಧಗಳನುಸಾರವಾಗಿ ಮುಂದುವರಿಸತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎಸ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

**HOME SECRETARIAT**

**NOTIFICATION**

**No.ಹೆಚ್ಡಿ 276 POSAE 2007, Bangalore, Dated :17-06-2011**

The Karnataka Government (Allotment of Quarters to Police Officers of and above the rank of Assistant Superintendents of Police) Rules, 2008 which the Government of Karnataka proposes to make in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990) read with section 30 and section 163 of the Karnataka Police Act, 1963 (Karnataka Act 4 of 1964) and rule 75 of the Karnataka Civil Services Rules is hereby published as required by clause (a) of sub-section (2) of section 3 of the Karnataka Civil Services Act, 1978 and sub-section (1) of section 163 of the Karnataka Police Act, 1963.

**RULES**

1. **Title, application and commencement.-** (1) These rules may be called the Karnataka Government (Allotment of Quarters to Police Officers of and above the rank of Assistant Superintendents of Police) Rules, 2011

(2) These rules shall apply to the officers of and above the rank of Assistant Superintendents of Police except the [illegible] specified in items (4) to (7) of clause (vii) of rule 4-A of the Licence fee rules for Government Buildings used as Residences in appendix IV to the Karnataka Civil Services Rules. These rules shall apply to the Government quarters situated in Bangalore which are at the disposal of DG and IGP.

(3) They shall come into force from the date of their publication in the Official Gazette

**2. Definition.-** (1) In these rules, unless the context otherwise requires,

(a) "Allotment" means the allotment of Government quarters placed at the disposal of the Director General and Inspector General of Police to a Police Officer for residential purpose on payment of licence fee;

(b) "Allottee" means a Police Officer to whom a Government quarters is allotted under these rules;

(c) "Designated Quarters" means the Government Quarters allotted to officers specified in items (4) to (7) of clause (vii) of rule 4-A of the Licence fee rules for Government Buildings used as Residences in appendix IV to the Karnataka Civil Services Rules;

(d) "Family" means wife or husband of a Police Officer, legitimate children and step children residing with and wholly dependent of Police Officer;

(e) "Government" means the State Government.

(2) All other words and expressions used herein, but not defined shall have the same meaning respectively assigned to them in the Karnataka Civil Service Rules and the Karnataka Civil Services (General Recruitment) Rules, 1977.

**3. Eligibility for allotment.-** (1) Officers of and above the rank of Assistant Superintendents of Police posted in Bangalore to any post, whether under Commissionerate of City Police or any other posts including ex-cadre posts outside the department not having own house within city limits of Bangalore are eligible for allotment of quarters under these rules.

(2) The allotment shall be subject to production of an affidavit to the effect that the allottee police officer does not own a house in his name or in the name of his spouse or dependent children in Bangalore Mahanagara Palike or Satellite Towns of Bangalore City or a house built on site allotted by the BDA or any other Government organization or Co-operative Societies. The Director General and Inspector General of Police may cause such enquiry as he deems necessary to ascertain whether an officer or his or her spouse or dependent owns a house or a flat in Bangalore City or in any of the Satellite towns of Bangalore City and after such enquiry, he may allot quarters to an police officer and his decision thereon shall be final. Any police officer who has furnished false affidavit in this regard shall be liable for disciplinary action for misconduct.

(3) The Officers, who have availed the benefit of house building advances and subsequently disposed of such property, shall not be considered for allotment of quarters under these rules.

(4) An allottee under these rules shall be permitted to occupy the quarters for a maximum period of five years from the date of allotment.

**4. Entitlement of allotment.-** (1) Allotment of Government quarters, out of the general pool of quarters available for allotment, shall be done on the basis of seniority determined with reference to the date of registration of the application

Provided that where more than one application is registered for allotment of quarters on the same date, the inter-se seniority of the applicant shall be determined with reference to his age i.e. the person elder in age shall be considered as senior to a person who is younger in age.

(2) Name of eligible applicants shall be entered in a register maintained for the purpose by the Buildings Section in the Office of the Director General and Inspector General of Police.

(3) If an officer refuses to occupy the quarters in terms of the allotment made, he shall forego his seniority. His seniority shall be reckoned from the day he applies a fresh again. However, he shall not be eligible for registration on second time within one year from the date of allotment made in his favour earlier.